ಅಸಲು ದಾವೆ ಸಂಖ್ಯೆ -54/2022
ಪಿ.ಡಬ್ಲ್ಯೂ - 01
ದಿನಾಂಕಃ 21-03-2025
ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.

**ಪಾಟೀ ಸವಾಲುಃ 3 ನೇ ಪ್ರತಿವಾದಿ ಪರ ಶ್ರೀ. ಎನ್ ಎಸ್ ಪಿ ವಕೀಲರಿಂದ**

ನೀವು ದಾವಾ ಆಸ್ತಿಯನ್ನು ಖರೀದಿ ಹಿಡಿಯುವ ಪೂರ್ವದಲ್ಲಿ ಮಾತುಕತೆ ಎಲ್ಲಿ ಆಗಿತ್ತು ಎಂದರೆ ದಾವಾ ಆಸ್ತಿಯ ಮೂಲ ಮಾಲೀಕರಾದ ಅಚ್ಯುತರಾವ ರಾಯಚೂರ ರವರೇ ದಾವಾ ಆಸ್ತಿಯನ್ನು ಮಾರುವದಾಗಿ ಮಾಹಿತಿ ನೀಡಿದ್ದರು. ಯಾವಾಗ ಮಾಹಿತಿ ನೀಡಿದ್ದರು ಎಂದರೆ 2010 ರ ಜನೇವರಿ ಅಥವಾ ಫೆಬ್ರುವರಿ ತಿಂಗಳಲ್ಲಿ ತಿಳಿಸಿದ್ದರು ಆದರೆ ದಿನಾಂಕ ನೆನೆಪಿಲ್ಲ. ಆಗ ಖರೀದಿಯ ಮಾತುಕತೆ ಆಗಿರುತ್ತದೆಯಾ ಎಂದರೆ ಹೌದು ಎಂದು ನುಡಿಯುತ್ತಾರೆ. ಖರೀದಿ ಮಾತುಕತೆಯಾಗುವಾಗ ಯಾರು ಯಾರು ಇದ್ದರು ಎಂದರೆ ಗೊವಿಂದ ಆಚಾರ್ಯ ರಾಯಚೂರ, ಅಚ್ಯುತರಾವ ರಾಯಚೂರ, ವಾದ್ಯರಾಜ ರಾಯಚೂರ ಮತ್ತು 3 ನೇ ಪ್ರತಿವಾದಿ ಇದ್ದರು. 2010 ನೇ ಜನೇವರಿ ಮತ್ತು ಫೇಬ್ರುವರಿ ತಿಂಗಳಲಿನಲ್ಲಿ ದಾವಾ ಆಸ್ತಿಗೆ ಸಂಬಂಧಪಟ್ಟಂತೆ ಖರೀದಿ ಬಗ್ಗೆ ಯಾವುದೇ ಮಾತು ಕತೆ ಆಗಿರುವುದಿಲ್ಲ ಎಂದರೆ ಆಗಿರುತ್ತದೆ ಎಂದು ನುಡಿಯುತ್ತಾರೆ. ಫೆಬ್ರುವರಿ ತಿಂಗಳಲ್ಲಿನಲ್ಲಿಯೇ ಮಾತುಕತೆಯಾಗಿದ್ದರೆ ಆ ವೇಳೆಯಲ್ಲಿಯೇ ಖರೀದಿ ಮಾಡಲು ನಿಮಗೇನು ತೊಂದರೆ ಇರಲಿಲ್ಲ ಎಂದರೆ ಆ ವೇಳೆಯಲ್ಲಿ ವಾಟ್ನಿ ಮುಖಾಂತರ ಅವರಿಗೆ ಪೂರ್ವ -ಪಶ್ಚಿಮ 22 ಅಡಿಗಳು, ಉತ್ತರ- ದಕ್ಷಿಣ 142 ಅಡಿಗಳನ್ನು ಖರೀದಿ ಮಾಡಲು ಹಣವನ್ನು ಹೊಂದಿಸುವ ಸಲುವಾಗಿ ಖರೀದಿ ಮಾಡುವುದು ತಡವಾಗಿರುತ್ತದೆ. ವಾಟ್ನಿ ಪತ್ರವನ್ನುನೆನಾದರು ನೀವು ನೋಡಿ ಓದಿದ್ದರಾ ಎಂದರೆ ಮೂಲ ಮಾಲೀಕರೆ ಓದಿರುತ್ತಾರೆ. ಆದರೆ ನಾನು ವಾಟ್ನಿ ಪತ್ರವನ್ನು ನೋಡಿರುತ್ತೇನೆ.

ವಾಟ್ನಿ ಪತ್ರ ಏನಾದರೂ ನೊಂದಣಿ ಯಾಗಿತ್ತಾ ಎಂದರೆ ಪಂಚಾಯತಿ ಮುಖಾಂತರ ಇದ್ದ ದಾಖಲೆಯನ್ನು ತೋರಿಸಿರುತ್ತಾರೆ. ವಾಟ್ನಿ ಯಾವ ತಾರೀಖು ಆಗಿರುತ್ತದೆ ಎಂದರೆ ನನಗೆ ನೆನೆಪು ಇರುವುದಿಲ್ಲ. ವಾಟ್ನಿ ಪತ್ರದಲ್ಲಿ ಯಾರುಯಾರಿಗೆ ಎಷ್ಟು ಎಷ್ಟು ಆಸ್ತಿಗಳು ಬಂದಿದ್ದವು ಎಂದು ನಿವೇನಾದರೂ ನೋಡಿದ್ದಿರಾ ಎಂದರೆ ಅಚ್ಯುತರಾವ ಅವರಿಗೆ ಬಂದ ಆಸ್ತಿಯ ವಿರವರವನ್ನು ನಾನು ನೋಡಿರುತ್ತೇನೆ. ಅಚ್ಯುತರಾವ ಅವರಿಗೆ ಯಾವ ಆಸ್ತಿ ಬಂದಿತ್ತು ಎಂದರೆ ದಾವಾ ಆಸ್ತಿ ಬಂದಿತ್ತು. ವಾಟ್ನಿ ಪತ್ರವನ್ನು ಏನಾದರು ನೀವು ನಕಲು ತೆಗೆಸಿ ಇಟ್ಟುಕೊಂಡಿದ್ದೀರಾ ಎಂದರೆ

ಇಲ್ಲ ಎಂದು ನುಡಿಯುತ್ತಾರೆ. ವಾಟ್ನಿ ಪತ್ರವನ್ನು ನಕಲು ಮಾಡಿಕೊಂಡು ಇಟ್ಟು ಕೊಳ್ಳಲು ನಿಮಗೇನೂ ತೊಂದರೆ ಇರಲಿಲ್ಲ ಎಂದರೆ ನಮ್ಮ ಮತ್ತು ಅವರ ನಡುವೆ ಚೆನ್ನಾಗಿಯೇ ಇತ್ತು.

ವಾಟ್ನಿ ಪತ್ರದ ಪ್ರಕಾರ ಪಂಚಾಯತಿಯಲ್ಲಿ ಕಾಗದ ಪತ್ರಗಳು ಏನಾದರೂ ಆಗಿವೆಯಾ ಎಂದರೆ ನನಗೆ ಮಾಹಿತಿ ಇಲ್ಲ ಎಂದು ನುಡಿಯುತ್ತಾರೆ. ವಾಟ್ನಿ ಪತ್ರದ ಪ್ರಕಾರ ಪಂಚಾಯತಿಯಲ್ಲಿ ಖಾತೆ ಬದಲಾವಣೆಯಾದ ಬಗ್ಗೆ ಮತ್ತು ಯಾರ ಹೆಸರಿನಲ್ಲಿ ಇತ್ತು ಎಂದರೆ ಅಚ್ಯುತರಾವ ರವರ ಹೆಸರಿನಲ್ಲಿ ಇತ್ತು ಎಂದು ನುಡಿಯುತ್ತಾರೆ. ನೀವು 2010 ರಲ್ಲಿ ಆಸ್ತಿ ಖರೀದಿ ಹಿಡಿಯುವಾಗ ಅಚ್ಯುತರಾವ ಹೆಸರಿನಲ್ಲಿ ಮಾತ್ರ ಇತ್ತು ಎಂದು ಸುಳ್ಳು ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ನೀವು ಖರೀದಿ ಹಿಡಿಯುವ ಪೂರ್ವದಲ್ಲಿ ಅವಶ್ಯಕ ದಾಖಲೆಗಳನ್ನು ಪರಿಶೀಲನೆ ಮಾಡದೆ ಖರೀದಿ ಮಾಡಿರುತ್ತೀರಿ ಎಂದರೆ ಸಾಕ್ಷಿಯು ಎಲ್ಲಾ ದಾಖಲೆಗಳನ್ನು ಪರಿಶೀಲಿಸಿ ನಂತರ ಖರೀದಿ ಮಾಡಿರುತ್ತೇನೆ ಎಂದು ನುಡಿಯುತ್ತಾರೆ.

ನೀವು ಯಾವಾಗ ದಾವಾ ಆಸ್ತಿಯನ್ನು ಖರೀದಿ ಹಿಡಿದಿರುತ್ತೀರಿ ಎಂದರೆ 2010 ನೇ ಇಸವಿಯ 10 ನೇ ಅಥವಾ 11 ನೇ ತಿಂಗಳಿನಲ್ಲಿ ಖರೀದಿ ಹಿಡಿದಿರುತ್ತೇನೆ. ಆ ವೇಳೆಯಲ್ಲಿ ನೀವೇನಾದರೂ ಉತಾರವನ್ನು ತೆಗೆಸಿದ್ದರಾ ಎಂದರೆ ಮೂಲ ಮಾಲೀಕರೆ ತೆಗೆದುಕೊಂಡು ಬಂದಿದ್ದರು ಎಂದು ನುಡಿಯುತ್ತಾರೆ. ಉತಾರವನ್ನು ನೀವು ನೋಡಿರುವುದಿಲ್ಲ ಎಂದರೆ ನೋಡಿರುತ್ತೇನೆ ಎಂದು ನುಡಿಯುತ್ತಾರೆ. ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಿದ್ದು ಅದು ಆಸ್ತಿ ನಂ. 83/ ದಾವಾ ಆಸ್ತಿಗೆ ಸಂಬಂಧಪಟ್ಟಿದ್ದು ಅದರಲ್ಲಿ ಎಷ್ಟು ಜನ ಮಾಲೀಕರ ಹೆಸರು ನಮೂದು ಆಗಿದೆ ಎಂದರೆ ಸಾಕ್ಷಿಯು ದಾಖಲೆಯನ್ನು ಪರಿಶೀಲಿಸಿ 5 ಜನರ ಹೆಸರು ನಮೂದು ಆಗಿದೆ ಎಂದು ನುಡಿಯುತ್ತಾರೆ. ಮುಂದುವರೆದು ಅಚ್ಯುತರಾವ ರಾಯಚೂರ ರವರೇ ಮೂಲ ಮಾಲೀಕರು ಆಗಿದ್ದರು ಎಂದು ನುಡಿಯುತ್ತಾರೆ. ಸದರಿ ದಾಖಲೆಯನ್ನು ನಿಡಿ-1 ಎಂದು ಗುರುತಿಸಲಾಯಿತು. ದಾವಾ ಆಸ್ತಿಯು 2010 ರಲ್ಲಿ ಸಾಮೂಹಿಕವಾಗಿ ಐದು ಜನರ ಮಾಲ್ಕಿ ಕಬ್ಜಾ ವಹಿವಾಟಿನಲ್ಲಿ ಇತ್ತು ಎಂದರೆ ಸರಿ.

ನಿಡಿ-1 ರ ಪ್ರಕಾರ ಅದರಲ್ಲಿ ಆಸ್ತಿಯ ಅಳತೆ ನಮೂದು ಮಾಡಿಲ್ಲ ಎಂದರೆ ಸಾಕ್ಷಿಯು ದಾಖಲೆಯನ್ನು ಪರಿಶೀಲಿಸಿ ಇಲ್ಲ ಎಂದು ನುಡಿಯುತ್ತಾರೆ. ದಾವಾ ಆಸ್ತಿಯ ಉತಾರದಲ್ಲಿ ಯಾವುದೇ ಅಳತೆ ಇಲ್ಲದಿದ್ದರು ಸಹ ದಾವಾ ಆಸ್ತಿಯ ಅಂದಿನ ಮಾಲೀಕರು ವಯಸ್ಸಾಗಿದ್ದು ಅದನ್ನು ದುರುಪಯೋಗ ಪಡಿಸಿಕೊಂಡು ನಿಮಗೆ ಬೇಕಾದಹಾಗೆ ಅಳತೆಯನ್ನು ನಮೂದಿಸಿ

ಖರೀದಿ ಪತ್ರವನ್ನು ಸೃಷ್ಠಿಸಿರುತ್ತೀರಿ ಎಂದರೆ ಸರಿಯಲ್ಲ.

ದಾವಾ ಆಸ್ತಿಯನ್ನು ಖರೀದಿ ಮಾಡುವ ವೇಳೆಯಲ್ಲಿ ಯಾರಾರು ಹಾಜರಿದ್ದರು ಎಂದರೆ ಗೋವಿಂದ ಆಚಾರ್ಯ ರಾಯಚೂರ, ಅಚ್ಯುತರಾವ ರಾಯಚೂರ, ವಾದ್ಯರಾಜ ರಾಯಚೂರ, ಪ್ರಸನ್ನ ರಾಯಚೂರ ಮತ್ತು ಇನ್ನೂ ಇಬ್ಬರು ಇದ್ದರು. ಮುಂದುವರೆದು ಒಟ್ಟು ಮುಕ್ತಿಯಾರ ನಾಮೆಯನ್ನು ಗೋವಿಂದ ಆಚಾರ್ಯ ರಾಯಚೂರ ಮತ್ತು ವಾದ್ಯರಾಜ ರಾಯಚೂರ ಪಡೆದುಕೊಂಡು ಹಾಜರಿದ್ದರು. ಅಚ್ಯುತರಾವ ರಾಯಚೂರ ರವರ ಸಹಿಯು ಖರೀದಿ ಪತ್ರದಲ್ಲಿ ಇರುವುದಿಲ್ಲ ಎಂದರೆ ಅವರ ಪರವಾಗಿ ಗೋವಿಂದ ಆಚಾರ್ಯ ರಾಯಚೂರ ಮತ್ತು ವಾದ್ಯರಾಜ ರಾಯಚೂರ ಜಿ ಪಿ ಎ ಪಡೆದು ಹಾಜರಿದ್ದರು.

ಗೋವಿಂದ ಆಚಾರ್ಯ ರಾಯಚೂರ ಮತ್ತು ವಾದ್ಯರಾಜ ರಾಯಚೂರ ರವರಿಗೆ ಬರೆದುಕೊಂಡು ಜಿ ಪಿ ಎ ಯನ್ನು ನೀವು ನೋಡಿದ್ದೀರಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ಸದರಿ ಜಿ ಪಿ ಎ ಯು ನೊಂದಣಿ ಯಾಗಿತ್ತೊ ಅಥವಾ ನೋಟರಿಯಾಗಿತ್ತು ಎಂದರೆ ನೊಂದಣಿಯಾಗಿದೆ ಎಂದು ಹೇಳಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ಜಿ ಪಿ ಎ ಯನ್ನು ಏನಾದರೂ ಉಪ ನೊಂದಣಾಧಿಕಾರಿಗಳ ಸಮಕ್ಷಮ ಹಾಜರುಪಡಿಸಿದ್ದೀರಾ ಎಂದರೆ ಹಾಜರುಪಡಿಸಿರಬಹುದು ಎಂದು ನುಡಿಯುತ್ತಾರೆ. ಸದರಿ ಜಿ ಪಿ ಎ ಯನ್ನು ತೆಗೆಸಲು ನೀವೆನಾದರೂ ಪ್ರಯತ್ನ ಪಟ್ಟಿದ್ದೀರಾ ಎಂದರೆ ಪ್ರಯತ್ನ ಪಟ್ಟಿಲ್ಲ ಎಂದು ನುಡಿಯುತ್ತಾರೆ. ಉಪ ನೊಂದಣಾಧಿಕಾರಿಗಳನ್ನು ಏನಾದರೂ ಈ ವಿಚಾರವಾಗಿ ಸಾಕ್ಷಿಧಾರರನ್ನಾಗಿ ವಿಚಾರಣೆ ಮಾಡುತ್ತೀರಾ ಎಂದರೆ ಮಾಡುತ್ತೇನೆ ಎಂದು ನುಡಿಯುತ್ತಾರೆ. ಯಾವುದೇ ಜಿ ಪಿ ಎ ಯನ್ನು ಹಾಜರು ಮಾಡದೇ ಇದ್ದರು ಸಹ ಉಪ ನೊಂದಣಾಧಿಕಾರಿಗಳ ಜೊತೆ ಮಿಲಾಪಿಯಾಗಿ ಸುಳ್ಳು ಅಳತೆಯನ್ನು ನಮೂದು ಮಾಡಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

ಖರೀದಿ ಮೊತ್ತವನ್ನು ಯಾರಿಗೆ ನೀಡಿರುತ್ತೀರಿ ಎಂದರೆ ಗೋವಿಂದ ಆಚಾರ್ಯ ರಾಯಚೂರ ಮತ್ತು ವಾದ್ಯರಾಜ ರಾಯಚೂರ ರವರಿಗೆ ನೀಡಿರುತ್ತೇನೆ. ಖರೀದಿ ಮೊತ್ತವನ್ನು ಅಚ್ಯುತರಾವ ರಾಯಚೂರ ರವರಿಗೆ ಏನಾದರೂ ನೀಡಿದ್ದೀರಾ ಎಂದರೆ ಗೋವಿಂದ ಆಚಾರ್ಯ ರಾಯಚೂರ ಮತ್ತು ವಾದ್ಯರಾಜ ರಾಯಚೂರರವರಿಗೆ ನೀಡಿರುತ್ತೇನೆ. ಅಚ್ಯುತರಾವ ರವರಿಗೆ ನೀಡಿರುವುದಿಲ್ಲ. ಗೋವಿಂದ ಆಚಾರ್ಯ ರಾಯಚೂರ ಮತ್ತು ವಾದ್ಯರಾಜ ರಾಯಚೂರ ರವರಿಗೆ ಯಾವುದೇ ಖರೀದಿ ಹಣವನ್ನು ನೀಡಿರುವುದಿಲ್ಲ ಎಂದರೆ ಸರಿಯಲ್ಲ.

ನಿಡಿ-1 ರಲ್ಲಿ ನಮೂದಿಸಿರುವ ಮಾಲೀಕರು ವಯಸ್ಸಾಗಿರುವುದನ್ನು ದುರುಪಯೋಗಪಡಿಸಿಕೊಂಡು ನಿಮಗೆ ಬೇಕಾಗದ ಹಾಗೆ ಅಳತೆಯನ್ನು ಬರೆದು, ಅವರು ನಿಮ್ಮ ಮೇಲೆ ಇಟ್ಟ ನಂಬಿಕೆಯ ಮೇರೆಗೆ ಕೇವಲ ಸಹಿಯನ್ನು ಮಾಡಿರುತ್ತಾರೆ ಎಂದರೆ ಸರಿಯಲ್ಲ. ಮುಂದುವರೆದು ಮೂಲ ಮಾಲೀಕರೇ ಖರೀದಿ ಪತ್ರವನ್ನು ಬರೆಸಿರುತ್ತಾರೆ.

ಮೂಲ ಮಾಲೀಕರು ಯಾವ ದಸ್ತಾವೇಜು ಬರಹಗಾರರಿಗೆ ಮಾಹಿತಿಯನ್ನು ನೀಡಿದ್ದರು ಎಂದರೆ ಮಾಹಿತಿ ಇಲ್ಲ ಎಂದು ನುಡಿಯುತ್ತಾರೆ. ಅವರು ಯಾವುದೇ ಮಾಹಿತಿಯನ್ನು ನೀಡದೇ ಇದ್ದರು ನೀವು ಮತ್ತು ನಿಮ್ಮ ತಂದೆ ಹೆಚ್ಚಿನ ಅಳತೆ ಬರೆದುಕೊಂಡು ಪತ್ರವನ್ನು ಸೃಷ್ಟಿಸಿ ಈ ಸುಳ್ಳು ಕೇಸನ್ನು ದಾಖಲು ಮಾಡಿದ್ದೀರಿ ಎಂದರೆ ಸರಿಯಲ್ಲ. ನಿಪಿ-7 ರಿಂದ 9 ರಲ್ಲಿ ಬರೆದಿರುವಂತೆ ಅಕ್ಕಪಕ್ಕದವರ ಆಸ್ತಿಯ ಮುಖಾಂತರ ವಹಿವಾಟು ಮಾಡುತ್ತಿದ್ದೇವು ಎಂದು ಬರೆದಿರುತ್ತೀರಿ, ಅಕ್ಕಪಕ್ಕದ ಮಾಲೀಕರು ಯಾರು ಎಂದರೆ 3 ನೇ ಪ್ರತಿವಾದಿಯ ಅಣ್ಣ ತಮ್ಮಂದಿರ ಆಸ್ತಿಯ ಮುಖಾಂತರ ಎಂದು ನುಡಿಯುತ್ತಾರೆ. ಗ್ರಾಮ ಪಂಚಾಯತಿಯವರು ರಸ್ತೆಯನ್ನು ಏನದರೂ ನಿರ್ಮಾಣ ಮಾಡಿದ್ದಾರಾ ಎಂದು ಕಾಂಕ್ರಿಟ್ ರಸ್ತೆ ನಿರ್ಮಾಣ ಮಾಡಿರುವುದಿಲ್ಲ ಆದರೆ ಕಾಲು ದಾರಿ ಇದೆ ಎಂದು ನುಡಿಯುತ್ತಾರೆ. ಪಂಚಾಯತಿಯ ದಾಖಲೆಯಲ್ಲಿ ದಾವಾ ಆಸ್ತಿಯ ಉತ್ತರ ಮತ್ತು ದಕ್ಷಿಣಕ್ಕೆ ರಸ್ತೆ ಇದೆ ಎಂದು ತೋರಿಸಲು ದಾಖಲೆಗಳು ಇದೆಯಾ ಎಂದರೆ ಇದೆ ಎಂದು ನುಡಿಯುತ್ತಾರೆ. ಅದರ ದೃಢಿಕೃತ ಪ್ರತಿಯನ್ನು ತಂದು ಹಾಜರುಪಡಿಸಲು ಆಗುತ್ತದೆಯಾ ಎಂದರೆ ಹಾಜರುಪಡಿಸುತ್ತೇನೆ ಎಂದು ನುಡಿಯುತ್ತಾರೆ.

ದಾವೆ ಹೂಡುವ ಸಂದರ್ಭ ದಲ್ಲಿ ನೀವು ಒಂದು ನಕಾಶೆಯನ್ನು ಹಾಜರುಪಡಿಸಿದ್ದು ಅದರಲ್ಲಿ ಯಾವುದೇ ನಮೂದಿಸಿಲ್ಲ ಎಂದರೆ ಖರೀದಿ ಪತ್ರದಲ್ಲಿ ನಮೂದಿಸಿದ್ದೇನೆ ಎಂದು ನುಡಿಯುತ್ತಾರೆ. ನಿಮ್ಮ ನಕಾಶೆಯಲ್ಲಿ ಉತ್ತರಕ್ಕೆ ರಸ್ತೆ ಇದೆ ಎಂದು ಸುಳ್ಳು ತೋರಿಸಿದ್ದೀರಿ ಎಂದರೆ ಸರಿಯಲ್ಲ. ದಕ್ಷಿಣಕ್ಕೆ ರಸ್ತೆ ಇದ್ದರು ಸಹ ರಸ್ತೆ ತೋರಿಸಿಲ್ಲ ಎಂದರೆ ರಸ್ತೆ ಇದೆ ಎಂದು ನುಡಿಯುತ್ತಾರೆ. ದಕ್ಷಿಣಕ್ಕೆ ಇರುವ ರಸ್ತೆಗೆ ಎಷ್ಟು ಅಗಲ ಇದೆ ಎಂದರೆ ಉತ್ತರ -ದಕ್ಷಿಣ 13 ಪೂಟ ರಸ್ತೆ ಇದೆ ಎಂದು ನುಡಿಯುತ್ತಾರೆ. ನಿಖರವಾಗಿ ನಿಮಗೆ ಅಳತೆ ಗೊತ್ತಿಲ್ಲ ಎಂದರೆ ನಾವು ಮತ್ತು 3 ನೇ ಪ್ರತಿವಾದಿ ಮತ್ತು ಅವರ ಸಂಬಂಧಿಕರು ಈ ದಕ್ಷಿಣಕ್ಕೆ ಇರುವ ರಸ್ತೆಯಲ್ಲಿ ವಹಿವಾಟು ಮಾಡುತ್ತಾರೆ.

ಪ್ರತಿವಾದಿಯರು ಹಾಜರುಪಡಿಸಿದ ನಕಾಶೆಯಲ್ಲಿ ದಾವಾ ಆಸ್ತಿಯ ಉತ್ತರಕ್ಕೆ ವಿ ಪಿ ಸಿ

ನಂ. 86/1 ಮತ್ತು 86 ಇರುತ್ತದೆ ಎಂದರೆ ಅದು ನನಗೆ ಗೊತ್ತಿಲ್ಲ. ವಿ ಪಿ ಸಿ ನಂ. 86/1 ರ ಆಸ್ತಿಯು 3 ನೇ ಪ್ರತಿವಾದಿಯ ಹೆಸರಿನಲ್ಲಿ ಇದೆ ಎಂದರೆ ನನಗೆ ಗೊತ್ತಿಲ್ಲ. ವಿ ಪಿ ಸಿ ನಂ. 86 ನ್ನು 3 ನೇ ಪ್ರತಿವಾದಿಯು ಫಕ್ಕಿರಪ್ಪ ಕುರುಬರ ರವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಿಮ್ಮ ಆಸ್ತಿ ಆದ ನಂತರ ಉತ್ತರಕ್ಕೆ 3 ನೇ ಪ್ರತಿವಾದಿ ಮತ್ತು ಫಕ್ಕೀರಪ್ಪ ಕುರುಬರ ರವರ ಆಸ್ತಿ ಇದೆ ಎಂದರೆ ಸಾಕ್ಷಿಯು ನನ್ನ ಆಸ್ತಿಯ ನಂತರ ರಸ್ತೆ ಇದೆ ಎಂದು ನುಡಿಯುತ್ತಾರೆ. ವಿ ಪಿ ಸಿ ನಂ. 86/1 ಮತ್ತು 86 ಉತ್ತರಕ್ಕೆ 3 ನೇ ಪ್ರತಿವಾದಿಯ ವಿ ಪಿ ಸಿ ನಂ. 90/ಎ ಆಸ್ತಿ ಇದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ವಿ ಪಿ ಸಿ ನಂ. 90/ಎ ಆಸ್ತಿಯನ್ನು ಹನಮವ್ವ ಮಹಾದೇವಪ್ಪ ಮುಂಡರಗಿ 2003 ರಲ್ಲಿ ಅದರ ಮೂಲ ಮಾಲೀಕರು ಮಾರಾಟ ಮಾಡಿರುತ್ತಾರೆ ಎಂದರೆ ನನಗೆ ಮಾಹಿತಿ ಇಲ್ಲ. 3 ನೇ ಪ್ರತಿವಾದಿಯು ಹಾಜರುಪಡಿಸಿದ ಹಾತ ನಕಾಶೆಯಲ್ಲಿ ಆಸ್ತಿಗಳ ಸಂಖ್ಯೆ ನಮೂದು ಮಾಡಿರುವುದು ಸರಿ ಇದೆಯಾ ಎಂದರೆ ವಿ ಪಿ ಸಿ ನಂ.82,83 ಆಸ್ತಿಗಳು ಮಾತ್ರ ಸರಿ ಇದೆ. ಉಳಿದ ಆಸ್ತಿಗಳು ನನಗೆ ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ. ಆಸ್ತಿ ನಂ 82 ರ ಪಶ್ಚಿಮಕ್ಕೆ 3 ನೇ ಪ್ರತಿವಾದಿಯ ವಿ ಪಿ ಸಿ ನಂ. 80 ರ ಮನೆ ಇದ್ದು ಸದರಿ ಮನೆಯ ದಕ್ಷಿಣ ದಿಕ್ಕಿನಲ್ಲಿರುವ ರಸ್ತೆಯ ಮುಖಾಂತರ ಅವರು ಓಡಾಡುತ್ತಾರೆ ಎಂದರೆ ಸರಿ.

3 ನೇ ಪ್ರತಿವಾದಿಯು ಸಲ್ಲಿಸಿದ ಹಾತ ನಕಾಶೆಯನ್ನು ಸಾಕ್ಷಿಗೆ ತೋರಿಸಿದ್ದು ಅದರಲ್ಲಿ ಕೆ ಎಲ್ ಎಮ್ ಎನ್ ಕೆ ರಲ್ಲಿ 15 ಪೂಟ ಅಗಲದ ರಸ್ತೆ ಇದೆ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ಸದರಿ ಹಾತ ನಕಾಶೆಯಲ್ಲಿ ಪೂರ್ವಕ್ಕೆ ತೋರಿಸಿರುವ ರಸ್ತೆಯು ಅಸ್ತಿತ್ವದಲ್ಲಿ ಇದೆ ಎಂದರೆ ಸರಿ. ಸದರಿ 15 ಪೂಟ ಅಗಲದ ರಸ್ತೆಯು ಪೂರ್ವದಿಕ್ಕಿನಲ್ಲಿರುವ ರಸ್ತೆಗೆ ಕೂಡುತ್ತದೆ ಎಂದರೆ ಅಲ್ಲಿ ರಸ್ತೆಯೇ ಇಲ್ಲ ಎಂದು ನುಡಿಯುತ್ತಾರೆ. ವಿ ಪಿ ಸಿ ನಂ. 84 ಮತ್ತು 85 ಆಸ್ತಿಯು ಸಹ 3 ನೇ ಪ್ರತಿವಾದಿಗೆ ಸೇರಿದ ಆಸ್ತಿ ಆಗಿರುತ್ತದೆ ಎಂದರೆ ಇರಬಹುದು ಎಂದು ನುಡಿಯುತ್ತಾರೆ.

ನಿಮ್ಮ ಆಸ್ತಿಯ ಉತ್ತರಕ್ಕೆ ಯಾವುದೇ ರಸ್ತೆ ಇಲ್ಲದೆ ಇದ್ದರು ಸಹ ರಸ್ತೆ ಇದೆ ಎಂದು ಸುಳ್ಳು ದಾವೆ ಮಾಡಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ನಿಮ್ಮ ದಾವಾ ಆಸ್ತಿಯು ಉತ್ತರ- ದಕ್ಷಿಣ 132 ಪೂಟು ಇದ್ದರು ಸಹ 140 ಪೂಟ ಇದೆ ಎಂದು ಖರೀದಿ ಪತ್ರದಲ್ಲಿ ಸುಳ್ಳು ಅಳತೆ ತೋರಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

3 ನೇ ಪ್ರತಿವಾದಿಯು ನಿಮಗೆ ಯಾವದೇ ತೊಂದರೆ ನೀಡದೆ ಇದ್ದರು ಸಹ ಅವರ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. 3 ನೇ ಪ್ರತಿವಾದಿಯು ದಾವಾ ಆಸ್ತಿಯ ಉತ್ತರಕ್ಕೆ ಇರುವ ರಸ್ತೆಯನ್ನು ಅತೀಕ್ರಮಣ ಮಾಡಿಕೊಂಡು ಅಕ್ರಮವಾಗಿ ಮಾರಾಟ ಮಾಡಿದ್ದಾರೆ ಎಂದು ಸುಳ್ಳು ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಉತ್ತರಕ್ಕೆ ರಸ್ತೆಯೇ ಅಸ್ತಿತ್ವದಲ್ಲಿ ಇರುವುದಿಲ್ಲ ಎಂದರೆ ರಸ್ತೆ ಇರುತ್ತದೆ ಎಂದು ನುಡಿಯುತ್ತಾರೆ. ರಸ್ತೆಯನ್ನು ಕುರಿತು 3 ನೇ ಪ್ರತಿವಾದಿಯರ ವಿರುದ್ಧ ಘೋಷಣಾತ್ಮಕ ದಾವೆಯನ್ನು ಏನಾದರೂ ಮಾಡಿದ್ದೀರಾ ಎಂದರೆ ರಸ್ತೆ ಸಲುವಾಗಿ ತಕರಾರು ಮಾಡಿದ್ದರಿಂದ ಈದಾವೆಯನ್ನು ಹೂಡಿರುತ್ತೇನೆ ಎಂದು ನುಡಿಯುತ್ತಾರೆ. ಈ ಪ್ರಕರಣದಲ್ಲಿ 1 ನೇ ಮತ್ತು 2 ನೇ ಪ್ರತಿವಾದಿಯರು ತಕರಾರನ್ನು ಸಲ್ಲಿಸಿರುವುದಿಲ್ಲ ಎಂದರೆ ದಾವೆ ಮಾಡಿರುವುದು ಸರಿ ಇರುವುದರಿಂದ ಅವರು ತಕರಾರು ಸಲ್ಲಿಸಿರುವುದಿಲ್ಲ. ಅವರ ಸಾಕ್ಷಿಯನ್ನು ಮಾಡಿಸಿರುತ್ತೀರಾ ಎಂದರೆ ಅವರೇ ದಾಖಲೆಗಳನ್ನು ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಅವರ ರಾಜಕೀಯ ಪ್ರಭಾವ ಬೀರಿ ತಕರಾರನ್ನು ಸಲ್ಲಿಸದೆ ಇರುವ ಹಾಗೆ ಮಾಡಿರುತ್ತೀರಿ ಎಂದರೆ ಸರಿಯಲ್ಲ. 3 ನೇ ಪ್ರತಿವಾದಿಯ ತಪ್ಪು ಇಲ್ಲದೇ ಇದ್ದರು ಸಹ ಅವರ ವಿರುದ್ಧ ಸುಳ್ಳು ದಾವೆ ಮಾಡಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

**<u>ಪಾಟೀ ಸವಾಲುಃ 1 ಮತ್ತು 2 ನೇ ಪ್ರತಿವಾದಿ ಪರ ಶ್ರೀ. ಎಮ್ ಎಸ್ ಎಮ್ ವಕೀಲರಿಂದ</u>**

ಸಾರ್ವಜನಿಕ ರಸ್ತೆಯು ಅತೀಕ್ರಮಣ ವಾಗಿದ್ದರೆ ಅದರೆ ವಿರುದ್ಧ ಉಪವಿಭಾಗಾಧಿಕಾರಿಗಳ ಮುಂದೆ ಮೇಲ್ಮಮನವಿಯನ್ನು ಸಲ್ಲಿಸಿರುವುದಿಲ್ಲ ಎಂದರೆ ಸಲ್ಲಿಸಿರುತ್ತೇನೆ. ಸದರಿ ಮೇಲ್ಮಮನವಿಯ ನಂಬರನ್ನು ಮತ್ತು ಅದರಲ್ಲಿ ಆದ ಅದೇಶದ ದೃಢಿಕೃತ ನಕಲನ್ನು ಏನಾದರೂ ಹಾಜರುಪಡಿಸುತ್ತೀರಾ ಎಂದರೆ ಮೇಲ್ಮಮನವಿಯ ನಂಬರ ಗೊತ್ತಿರುವುದಿಲ್ಲ ಆದರೆ 2021 ನೇ ಇಸವಿಯಲ್ಲಿ ಸಲ್ಲಿಸಿರುತ್ತೇನೆ ಆದೇಶದ ನಕಲನ್ನು ಹಾಜರುಪಡಿಸುತ್ತೇನೆ. ರಸ್ತೆಯ ತೆರೆವುಗೊಳಿಸಲು ಉಪ ವಿಭಾಗಾಧಿಕರಿಗಳಿಗೆ ಮಾತ್ರ ಅಧಿಕಾರವಿದ್ದು ಮಾನ್ಯ ನ್ಯಾಯಾಲಯದಲ್ಲಿ ಆದೇಶ ಪಡೆಯಲು ಅರ್ಹ ಇರುವುದಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

( ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೆ. ಸರಿ ಅದೆ.

ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂಡಾಧಿಕಾರಿಗಳು, ಸವಣೂರು.